ಕರ್ನಾಟಕ ವಿಧಾನ ಸಭೆ

ದಿನಾಂಕ ೭ನೇ ಬುಧುವಾರ, ಆಗಸ್ಟ್ ೧೯೮೫

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಹನ್ನೊಂದು ಘಂಟೆಗೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಒಣಬೇಸಾಯ ಅಭಿವೃದ್ಧಿ ಯೋಜನೆ

೨೨೬. (ಳಿಳಿ) ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ನೀರಾವರಿಯಾಗತಕ್ಕ ಜಮೀನಿನ ವಿಸ್ತೀರ್ಣವೆಷ್ಟು ಹಾಗೂ ಮಳೆಯ ನೀರಿನ ಮೂಲವನ್ನೇ ಅವಲಂಬಿಸಿಕೊಂಡಿರುವ ಭೂಮಿ ಎಷ್ಟು ?

ಆ) ಮಳೆಯನ್ನೇ ನಂಬಿಕೊಂಡಿರುವ ಭೂಮಿಯಲ್ಲಿ ಒಣ ಬೇಸಾಯ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೇ? ಹಾಗಿದ್ದಲ್ಲಿ ವಿವರಗಳನ್ನು ಕೊಡುವುದು?

ಇ) ಒಣ ಬೇಸಾಯ ಮಾಡುವ ರೈತರಿಗೆ ಕೊಡುತ್ತಿರುವ ರಿಯಾಯಿತಿಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಕೃಷಿ ರಾಜ್ಯ ಸಚಿವರು).—

ಅ) ಒಟ್ಟು ನೀರಾವರಿ ಪ್ರದೇಶ —೧೪೬೨೨ ಹೆಕ್ಟೇರುಗಳು
ಮಳೆಯ ನೀರಿನ ಮೂಲವನ್ನೇ
ಅವಲಂಬಿಸಿರುವ ಪ್ರದೇಶ —೩೧೮೧೭ ಹೆಕ್ಟೇರುಗಳು

ಆ) ಹೌದು. ಈ ಕೆಳಕಂಡ ಮಿಷ್ಕಿ ಬೆಳೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

೧. ೧೦೦೦ ಹೆಕ್ಟೇರ್ ಪ್ರದೇಶದ ಮಿಷ್ಕಿ ಬೆಳೆ ಅಭಿವೃದ್ಧಿ ಯೋಜನೆ;

೨. ಮಳೆ ಮಾಪನ ಕೇಂದ್ರಗಳ ಸುತ್ತಲಿನ ೧೦೦ ಹೆಕ್ಟೇರ್ ಪ್ರದೇಶದ ಮಿಷ್ಕಿ ಬೆಳೆ ಅಭಿವೃದ್ಧಿ ಯೋಜನೆ

೩. ಭೂಸಾರ ಸಂರಕ್ಷಣಾ ಯೋಜನೆ;

ಇ) ಕೇಂದ್ರ ನಿರ್ವಹಣಾ ಯೋಜನೆಯಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಕೃಷಿ ಸಾಮಗ್ರಿಗಳ ಬಿತ್ತಿಗಳನ್ನು ಪುಫಲತ್ತಾಗಿ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ ಇದಲ್ಲದೆ, ಭೂಸಾರ ಸಂರಕ್ಷಣಾ ಯೋಜನೆಯಲ್ಲಿ ಬದುಗಳ ನಿರ್ಮಾಣ ಮಾಡಲಾಗುವುದು.

ಶ್ರೀ ಕೃಷ್ಣ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ "೧೦೦೦ ಹೆಕ್ಟೇರ್ ಪ್ರದೇಶದ ಮಿಷ್ಕಿ ಬೆಳೆ ಅಭಿವೃದ್ಧಿ ಯೋಜನೆ" ಎಂದು ಹೇಳಿದ್ದಾರೆ. ಇದು ಕಾರ್ಯರೂಪದಲ್ಲಿ ಇದೆಯೇ? ಇಲ್ಲದಿದ್ದರೆ ಇದನ್ನು ತೆಗೆದುಕೊಳ್ಳುವ ಉದ್ದೇಶ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್.—ಈಗಾಗಲೇ ಕೆಲಸವನ್ನು ತೆಗೆದುಕೊಂಡಿದ್ದೇವೆ. ೧೯೮೪-೮೫ನೇ ಸಾಲಿನಲ್ಲಿ ಪೂವಿನಕೆರೆಯಲ್ಲಿ ೪೧೨ ಹೆಕ್ಟೇರ್, ಮುದುಗೆರೆಯಲ್ಲಿ ೪೦೦ ಹೆಕ್ಟೇರ್, ರಾಜನಹಳ್ಳಿಯಲ್ಲಿ ೧೪೦ ಹೆಕ್ಟೇರ್ ತೆಗೆದುಕೊಂಡಿದ್ದೇವೆ. ಇನ್ನು ೧೯೮೫-೮೬ನೇ ಸಾಲಿನಲ್ಲಿ ಐಚನಹಳ್ಳಿ, ಬೂದನಕೆರೆ, ಬೊಮ್ಮಾಪುರ ಹಾಗೂ ದೊಡ್ಡ ಗಾಟಿಗನಹಳ್ಳಿಯಲ್ಲಿ ೧ ಸಾವಿರ ಹೆಕ್ಟೇರ್‌ನಲ್ಲಿ ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ.

ತುಂಕೋಳ ವೇತನ ಶ್ರೇಣಿಯಲ್ಲಿ ಹಲವು ಪ್ರಾಥಮಿಕ ಶಾಲಾ ಶಿಕ್ಷಕರಿಗಾದ ತಾರತಮ್ಯ ಕುರಿತು

೨೩೦ (೭೫೪) ಶ್ರೀ ಬಿ.ವಿ. ತುಂಗಲ್ (ಬೀಳಗಿ).—ಪೂರ್ಣ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತುಂಕೋಳ ವೇತನ ಆಯೋಗದ ಮೇರೆಗೆ ಹೊರಡಿಸಲಾದ ಸರ್ಕಾರಿ ಆಜ್ಞೆ ಸಂ. ಎಫ್‌ಡಿ ೩೨ ಎಸ್.ಆರ್.ಪಿ. (೧) ೭೫ ದಿ. ೧೬-೮-೭೫ನ್ನು ೧೯೬೧-೭೦ರ ಪೂರ್ವ ಎಸ್.ಎಸ್.ಸಿ. ಪಾಸಾದ ಶಿಕ್ಷಕರಿಗಷ್ಟೇ ಸೀಮಿತಗೊಳಿಸಿದ್ದರಿಂದ ೧೯೬೧ಕ್ಕೆ ಮೊದಲೇ ಎಸ್.ಎಸ್.ಸಿ. ಪಾಸಾದ ಶಿಕ್ಷಕರಿಗೆ ವೇತನ ಕೊರತೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? (ಉದಾ. ಪ್ರಕರಣ ನಂ. ಇಡಿ ೮೮ ಪಿ.ಎಂ.ಸಿ. ೮೦-೮೧).

ಆ) ೧೯೬೧ರ ಪೂರ್ವದಲ್ಲಿ ಎಸ್.ಎಸ್.ಸಿ. ಪಾಸಾದ ಶಿಕ್ಷಕರಿಗೂ ವೇತನ ಕೊರತೆ ತುಂಬಲು ಸರ್ಕಾರದವರು ಸರ್ಕಾರಿ ಆಜ್ಞೆಯನ್ನು ಪುನರ್ವಿಮರ್ಶೆ ಮಾಡುವರೇ ?

ಶ್ರೀ ಗೋವಿಂದೇಗೌಡ (ಪೂರ್ಣ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ.ವಿ. ತುಂಗಲ್.—ಅಧ್ಯಕ್ಷರೇ, ಎಸ್.ಎಸ್.ಎಲ್.ಸಿ. ಪಾಸಾದವರಿಗೆ ೧೯೬೧ ರಿಂದ ೭೦ರ ವರೆಗೆ ತುಂಕೋಳ್ ಪೇ ಸ್ಕೇಲ್ ಪ್ರಕಾರ ವೇತನ ಕೊಡಬೇಕೆಂದಿದೆ. ಆದರೆ ಇದರಿಂದ ಕೆಲವು ವ್ಯತ್ಯಾಸಗಳು ಆಗಿವೆ. ಇದರಿಂದ ವೈಶಮ್ಯಕ್ಕೆ ಕಾರಣ ಆಗಿದೆ. ಯಾರು ಜೂನಿಯರ್ ಇರುತ್ತಾರೋ ಅವರು ಸೀನಿಯರ್‌ಗಿಂತ ಹೆಚ್ಚು ವೇತನ ಪಡೆಯುತ್ತಿದ್ದಾರೆ. ಹಿರೇಕೆರೂರಿನ ವಿ. ವಿ. ಮಂಡಲ್ ಎನ್ನುವವರಿಗೆ ಇದರಿಂದ ಅನ್ಯಾಯವಾಗಿದೆ. ಇವರಿಗೆ ಯೋಗ್ಯ ರೀತಿಯ ನ್ಯಾಯ ದೊರಕಿಸ ಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಅವರ ಬಗ್ಗೆ ವಿವರವನ್ನು ಕಳುಹಿಸಿಕೊಡಿ. ನಾನು ಪರಿಶೀಲನೆ ಮಾಡುತ್ತೇನೆ. ೧೯೬೧ರಿಂದ೭೦ರವರೆಗೆ ಎಸ್.ಎಸ್.ಸಿ. ಮಾಡಿದವರಿಗೆ ಸೌಲಭ್ಯವನ್ನು ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿತ್ತು. ೬೧ಕ್ಕಿಂತಾ ಮೊದಲಿನವರಿಗೆ ಅನ್ಯಾಯ ಆಗಿದೆ ಎಂದು ಅರ್ಜಿಗಳು ಬಂದವು. ಅವನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದರಿಂದ ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಬಿ.ವಿ. ತುಂಗಲ್.—೧೯೬೧ಕ್ಕಿಂತ ಹಿಂದಿನವರಿಗೆ ಅನ್ಯಾಯವಾಗಿರುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದೇಗೌಡ.—೧೯೬೧ರಿಂದ ಹಿಂದಿನದು ತುಂಕೋಳ್ ವರದಿಯಲ್ಲಿ ಅದು ಸೇರಿಲ್ಲ. ಹಾಗೂ ಅದನ್ನು ಕೊಡಬೇಕೆಂದು ಅವರು ಆದೇಶ ಕೊಟ್ಟಿಲ್ಲ. ಆದರೆ ತಮ್ಮ ಉಪಾಧ್ಯಾಯರ ಬೇಡಿಕೆಗಳನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ವಿದ್ಯಾ ಇಲಾಖೆಯವರು ಕೇಳಿದ್ದರಿಂದ ಅದನ್ನು ಲಾ ಡಿಪಾರ್ಟ್‌ಮೆಂಟಿನವರಿಗೆ ಕಳುಹಿಸಲಾಗಿದೆ. ಈ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ.